# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಿತ್ತೂರ.

ದಿನಾಂಕಃ 09.06.2026 ರಂದು ಆರ್.ಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ವಿ ಜಿ ಬಿ ವಕೀಲರಿಂದಃ**

1. ಅರ್ಜಿದಾರ ನನ್ನ ತಂದೆ ಎಂದರೆ ಸರಿ. ಸದರಿಯವರಿಗೆ 90 ವರ್ಷ ವಯಸ್ಸು ಎಂದರೆ ಸರಿ. ಸದರಿಯವರಿಗೆ ದುಡಿಮೆ ಇಲ್ಲ ಮತ್ತು ಯಾವುದೇ ಆದಾಯ ಇಲ್ಲ ಎಂದರೆ ಸರಿ. ಸದರಿಯವರು ಮೊದಲು ಬಟ್ಟೆ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ನಾವು ಸದರಿಯವರಿಗೆ ಮೂರು ಜನ ಗಂಡು ಮಕ್ಕಳು ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು. ಒಬ್ಬ ಗಂಡುಮಗ ತೀರಿಕೊಂಡಿದ್ದಾರೆ ಎಂದರೆ ಸರಿ. ಸದರಿ ಮಕ್ಕಳ ಮದುವೆಯನ್ನು ನನ್ನ ತಂದೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ನಾನು ಬಟ್ಟೆ ವ್ಯಾಪಾರ ಮಾಡುತ್ತೇನೆ ಎಂದರೆ ಸರಿ. ನಾನು ಸ್ವಂತ ಮನೆಯಲ್ಲಿ ವಾಸಿಸುತ್ತೇನೆ ಮತ್ತು ಸ್ವಂತ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತೇನೆ ಎಂದರೆ ಸರಿ. ಸದರಿ ಅರ್ಜಿದಾರರ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. ಸದರಿಯವರು ಗುರುವಾರ ಪೇಟೆಯಲ್ಲಿ ಒಂದು ಮನೆಯನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ಸದರಿ ಮನೆಯನ್ನು ನವೀಕರಣ ಮಾಡಿ ಅಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಬೇರೆ ಬಾಡಿಗೆ ಅಂಗಡಿಯಲ್ಲಿ ಸದರಿಯವರು ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಸದರಿ ನವೀಕರಣವಾದ ಮನೆಯಲ್ಲಿ ಅಂಗಡಿ ಮಾಡಿಕೊಂಡು ವ್ಯಾಪಾರ ಮಾಡುತ್ತಿದ್ದೆವು ಎಂದರೆ ಸರಿ. 1986 ರಲ್ಲಿ ಖರೀದಿಯಾಗಿದೆ ಎಂದರೆ ಸರಿ. ಎರಡು ವರ್ಷಗಳ ನಂತರ ನವೀಕರಣ ಮಾಡಲಾಗಿದೆ ಎಂದರೆ ಸರಿ.

1984 ರಲ್ಲಿ ವ್ಯಾಪಾರ ಮಾಡುತ್ತಿದ್ದೆ. ವ್ಯಾಪಾರ ಮಾಡಲು ನನ್ನ ತಂದೆ ಬಂಡವಾಳ ಹಾಕಿ ಕಲಿಸಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರ ಬೇರೆ ಮಕ್ಕಳಿಗೆ ತಿಳಿಸಲಾರದೇ ನಾನು ಸದರಿ ಮನೆಯನ್ನು ನನ್ನ ಹೆಸರಿಗೆ ಖರೀದಿ ಮಾಡಿದ್ದೇನೆ ಎಂದರೆ ಸರಿ. ಸದರಿ ಸಮಯದಲ್ಲಿ ಖರೀದಿ ಹಣವನ್ನು ನಾನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಇದೇ ನ್ಯಾಯಾಲಯದಲ್ಲಿ ಅಸೂಲ ದಾವೆ ಸಂಖ್ಯೆ07/2021 ದಾಖಲಾಗಿದೆ ಎಂದರೆ ಸರಿ.

2. ನಾನು ಲೇವಾದೇವಿ ಬಡ್ಡಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ಸದರಿ ವ್ಯವಹಾರದಿಂದ ತಿಂಗಳಿಗೆ ಒಂದು ಲಕ್ಷ ಆದಾಯ ಇದೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿಂಗಳಿಗೆ ರೂ.10,000/- ಜೀವನಾಂಶ ಕೊಡುವ ಆರ್ಥಿಕ ಶಕ್ತಿ ಇದೆ ಎಂದರೆ ಸರಿಯಲ್ಲ. ನಾನು ಹೊಸ ಮನೆಯ ಹೊಸ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದೇನೆ ಎಂದರೆ ಸರಿ. ಹಳೆ ಮನೆಯನ್ನು ನವೀಕರಣ ಮಾಡಿ ಅಂಗಡಿ ವ್ಯಾಪಾರ ಮಾಡುತ್ತೇನೆ ಎಂದು ಅರ್ಜಿದಾರ ಕೇಳಿದರೂ ಸಹ ಕೊಟ್ಟಿಲ್ಲ ಎಂದರೆ ಸಾಕ್ಷಿ ಸದರಿಯವರಿಗೆ ವಯಸ್ಸಾಗಿದೆ ವ್ಯಾಪಾರ ಮಾಡಲು ಆಗುವುದಿಲ್ಲ ಎಂದು ಕೊಟ್ಟಿಲ್ಲ ಎನ್ನುತ್ತಾರೆ. ಶಕ್ತಿ ಇದೆ ಅಂಗಡಿ ಬೀಗ ಕೊಡು ಎಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಶಕ್ತಿ ಇಲ್ಲ ಎಂಬ ಕಾರಣಕ್ಕಾಗಿ ಈ ಅರ್ಜಿಯನ್ನು ಸಲ್ಲಿಸಲಾಗಿದೆ ಎಂದರೆ ಸರಿ. ಅರ್ಜಿದಾರರಿಗೆ ಬಿಪಿ, ಶುಗರ್, ಅಸ್ಥಮಾ ಇರುವ ಕಾರಣ ತಿಂಗಳಿಗೆ ರೂ.10,000/- ಜೀವನಾಂಶ ಕೊಡಲು ನಾನು ಭಾಧ್ಯಸ್ಥನು ಎಂದರೆ ಸರಿಯಲ್ಲ. ನನಗೆ ಸದರಿ ಹಣ ಕೊಡಲು ಆರ್ಥಿಕ ಸಾಮರ್ಥ್ಯ ಇದೆ ಎಂದರೆ ಸರಿಯಲ್ಲ.

3. ನನ್ನ ಮಗಳು ಮತ್ತು ಮಗ ವೈದ್ಯಕೀಯ ಮತ್ತು ತಾಂತ್ರಿಕ ವಿದ್ಯಾಭ್ಯಾಸ ಮಾಡುತ್ತಿಲ್ಲ, ಆದಕಾರಣ ನನ್ನ ಮಕ್ಕಳ ಶಾಲಾ ಖರ್ಚು ಅತಿ ಹೆಚ್ಚು ಇಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆ ಇರುವುದಿಲ್ಲ.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಮಹಮ್ಮದ ಅಲಿ ನಾಯಕ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಕಿತ್ತೂರ.